ಹಾಕುತ್ತಾರೆ ಗೊತ್ತಾ... ಅದಕ್ಕಾಗೇ ನಮ್ಮ ದೇಶದಲ್ಲಿ ರಿಸರ್ಚ್ ಇನೋವೇಶನ್ ಇಲ್ಲದೇ ಇರೋದು... ಅದಕ್ಕಾಗೇ ನಾನು ಅವರ ತಲೆಯಿಂದ ಆದಷ್ಟು ತೆಗೆದುಹಾಕಲು ಪ್ರಯತ್ನ ಮಾಡೋದು. ಈಗ ನಾನೇನು ಮಾಡುತ್ತಿದ್ದೇನಲ್ಲ; ಅದು ಪುಣ್ಯದ ಕೆಲಸ ಗೊತ್ತಾಯಿತಾ' ಎನ್ನುತ್ತಿದ್ದಂತೆ ಎಲ್ಲರಿಗೂ ಉತ್ತರ ಸಿಕ್ಕಿದಂತೇ ವ್ಹಾ ವ್ಹಾ ಎನ್ನುತ್ತ ರಾಜ ತನ್ನ ಕುತ್ತಿಗೆಯ ಹಾರವನ್ನು ತೆಗೆದು ಪ್ರಜೆಯ ಮೇಲೆ ಎಸೆಯುವಂತೆ ಕೆಲವರು ಕೈಯಲ್ಲಿದ್ದ ಮಾಣಿಕ್ ಚಂದ್, ವಿಮಲ್, ರಾಜಾ ಖೈನಿ, ಮಧು ತಂಬಾಕನ್ನು ಬಶೀರನ ಕೈಯಲ್ಲಿ ಇಡುತ್ತಿದ್ದರೆ, ಕೆಲವರು ಸಿಗರೇಟ್ ಆಫರ್ ಮಾಡುತ್ತಿದ್ದರು.

ಇವೆಲ್ಲದರ ನಡುವೆ ಹಿಂದಿನ ವಾರವಷ್ಟೇ ಭಕ್ತಿ ಚಿತ್ರ ಮುಗಿಯುತ್ತಿದ್ದಂತೆ ಬಾಗಿಲಲ್ಲಿ ಬಂದು ಎಲ್ಲರಿಗೂ ಕೈ ಕೊಡುತ್ತಾ 'ಹೊಸ ಕ್ಯಾಸೆಟ್ ಅಂಗಡಿ ಹುಡುಕಿದ್ದೇನೆ, ಪ್ರಿಂಟ್ ಬಹಳ ಚೆನ್ನಾಗಿದೆ, ರೀಲು ಕಚ್ಚಿಕೊಳ್ಳುವುದಿಲ್ಲ. ಬರುವ ವಾರ ಬರಿ ಇಂಗ್ಲಿಷ್ ಬೇಡ. ಇಂಡಿಯನ್‌ದೂ ತರೋಣ' ಎಂದು ಎಲ್ಲರಿಗೂ ಪ್ರಾಮಿಸ್ ಮಾಡಿದ್ದ. ಹಾಗಾಗಿ ಎಲ್ಲರೂ ಮಹದಾಸೆಯಿಂದ ಕಾಯುತ್ತಿದ್ದರು. ಅಷ್ಟೊತ್ತಿಗಾಗಲೇ ಹುಡುಗರ ಮಿಡಿತ ಅರ್ಥ ಮಾಡೀಕೊಂಡ ಕುಲಕರ್ಣಿ 'ಇಂದು ಕಾರ್ಯಕ್ರಮ ರದ್ದಾಗಿದೆ. ಬಶೀರ ಊರಲ್ಲಿಲ್ಲ. ನಾಳೆ ಬೆಳಿಗ್ಗೆ ಬರತಾನೆ. ನನ್ನ ರೂಮಲ್ಲಿ ಕೆಲವು ಮ್ಯಾಗಜಿನ್‌ಗಳಿವೆ ಇವತ್ತು ಅದರಲ್ಲೇ ಸುಧಾರಿಸಿಕೊಳ್ಳಿ' ಎಂದು ಹೇಳಿ ರೂಮಿನ ಕಡೆಗೆ ಹೋಗುತ್ತಿದ್ದಂತೆಯೇ ಕೆಲವರು ಅವನನ್ನು ಹಿಂಬಾಲಿಸಿದರು.

ಪೂರ್ತಿ ಹೆದರಿದ್ದ ಆರಾಧ್ಯನಿಗೆ ಪೊಲೀಸರು ಬಂದು ಇಷ್ಟೆಲ್ಲಾ ಕೇಳಿದರೂ ಹೀಗೆಲ್ಲ ನಡೆಯಲು ಸಾಧ್ಯವಿಲ್ಲವೆಂಬ ಧೈರ್ಯವಿತ್ತು. ಹಾಗಾಗೇ ಪೊಲೀಸರ ಮುಂದೆ ಇದು ಸಾಧ್ಯವೇ ಇಲ್ಲ ಎಂದು ಹೇಳಲಿಕ್ಕೆ ಹಿಂಜರಿಯಲಿಲ್ಲ. ಕುಲಕರ್ಣಿ ಪೊಲೀಸರಿಗೆ ತಿಳಿಸಿ ಹೇಳಿದಮೇಲೆ ಸ್ವಲ್ಪ ಬಲ ಬಂದಿದ್ದಂತೂ ಹೌದು. ರಾತ್ರಿ ಹನ್ನೊಂದುವರೆ ಗಂಟೆ ಆಗಲೇ ಆಗಿತ್ತು. ಸ್ವಲ್ಪ ಹೊತ್ತು ದಿನಪತ್ರಿಕೆ ಓದಿದ ಹಾಗೆ ಮಾಡಿ 'ಎ' ಬ್ಲಾಕಿನ ಮೊದಲ ಮಹಡಿಯಲ್ಲಿರುವ ತನ್ನ ರೂಮಿಗೆ ಬಂದು ಮಲಗಿಕೊಂಡ. ಮೂರು ಜನರಿರುವ ತನ್ನ ರೂಮಿನಲ್ಲಿ ಸೀನಿಯರ್ ಲಕ್ಷ್ಮಣ ದಾಸ್ ಇನ್ನೂ ಒಳಗೆ ಬಂದಿರಲಿಲ್ಲ. ಮತ್ತೊಬ್ಬ ನಾಲ್ಕು ದಿವಸದ ಮಟ್ಟಿಗೆ ಊರಿಗೆ ಹೋಗಿದ್ದ. ಎಷ್ಟೇ ಧೈರ್ಯ ಬಂದರೂ ಕೇವಲ ಎರಡು ತಾಸಿನಲ್ಲಿ ಇಷ್ಟೆಲ್ಲ ಆಗಿಹೋಯಿತಲ್ಲ ಎಂದುಕೊಳ್ಳುತ್ತಲೇ ಮಲಗಿದ್ದ. ಬಾಯಾರಿಕೆ, ಸೆಕೆ, ಹೆದರಿಕೆಯಿಂದಾಗಿ ಗಂಟಲು ಕಟ್ಟಿದ ಹಾಗಾದರೂ ಯಾರೋ ಕುತ್ತಿಗೆ ಒತ್ತುತ್ತಿದ್ದಾರೆ ಎಂದುಕೊಂಡು ಆಗಾಗ ಎದ್ದು ಮತ್ತೆ ಮಲಗುತ್ತಿದ್ದ. ಊರಿನ ಹಳೇ ಮನೆಯಲ್ಲಿ ಆ ಜಗುಲಿಯ ಜಂತಿ ಕೆಳಗೆ ಮಲಗಿದ್ದಾಗ ಕೆಲವು ಬಾರಿ ಆಗಿದ್ದಿದೆ. ಆದರೆ ಇವತ್ತಿನದು ಮಾತ್ರ ಬೇರೆಯೇ ಆಗಿತ್ತು. ಮೊದಲು ಎದ್ದು ಪಂಖವನ್ನು ಸ್ವಲ್ಪ ಜೋರುಮಾಡಿ ಮಲಗಿ ಇನ್ನೂ ಹತ್ತು ನಿಮಿಷವಾಗಿರಲಿಲ್ಲ. ಮತ್ತೆ ಕುತ್ತಿಗೆ ಒತ್ತಿದ ಹಾಗೇ ಆಗಿ ಎದ್ದು ನೀರು ಕುಡಿದು ಉಚ್ಚೆ ಹೊಯ್ಯಲೆಂದು ಬಾಗಿಲ ಕಡೆ ಧಾವಿಸುತ್ತಿದ್ದಂತೇ ಕತ್ತಲೆಯಲ್ಲಿ ಚಾದರ ಹೊದ್ದುಕೊಂಡು ಹೊರಗೆ ನೋಡುತ್ತಿದ್ದ ಲಕ್ಷ್ಮಣ ದಾಸ್ 'ಆರಾಧ್ಯ... ಈಗ ಹೊರಗೆ ಹೋಗಬೇಡ. ಬಶೀರ ಮತ್ತು ಅವನು ಎತ್ತು ಹಾಕಿಕೊಂಡು ಬಂದ ಹುಡುಗಿ ಹೊರಗೇ ಇದ್ದಾರೆ, ಅವರ ಮಧ್ಯ ದೊಡ್ಡ ಜಗಳವೇ ಆಗುತ್ತಿದೆ' ಎಂದ. ಆರಾಧ್ಯ ಈಗಾಗಲೇ ನಿದ್ರೆಗಣ್ಣಿನಲ್ಲಿದ್ದಿದ್ದರಿಂದ ಒಮ್ಮೆಲೆ ಏನಾಗುತ್ತಿದೆ ಎಂದೇ ಅರ್ಥವಾಗದೇ ಹೆದರಿದ. ಸೀನಿಯರ್, ರೂಮ್‌ಮೇಟ್ ಲಕ್ಷ್ಮಣ ದಾಸ್ ಹೇಳಿದ ಮೇಲೆ ನಂಬದೇ ಉಪಾಯವೇ ಇರಲಿಲ್ಲ. ಮತ್ತೆ ಕಿಡಕಿಯಿಂದ ಇಣುಕುವ ಧೈರ್ಯ ಮೊದಲೇ ಇರಲಿಲ್ಲ.

★★★

ಪೊಲೀಸರು ಗೇಟು ಒಳಗೆ ಬರುತ್ತಿದ್ದಂತೇ ಬಶೀರನಿಗೆ ಸುದ್ದಿ ಹೋಗಿತ್ತು. ಇದು ಆಟೊ ಡ್ರೈವರದ್ದೇ